ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 405/2024

ಸಿ ಡಬ್ಲ್ಯೂ– 1
ಪಿ ಡಬ್ಲ್ಯೂ– 1

ದಿಃ 20–12–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಯಾದೋಬಾ ಹರಿಕಂತ್ರ |
| ತಂದೆಯ ಹೆಸರುಃ | ಲಿಂಗಪ್ಪ |
| ವಯಸ್ಸುಃ | 64 ವರ್ಷ |
| ಉದ್ಯೋಗಃ | ಮೀನುಗಾರಿಕೆ |
| ವಿಳಾಸಃ | ಹಾರವಾಡ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ದಿಃ23–04–2024 ರಂದು ನನ್ನ ಮಗ ಸುಮಂತ ಬೆಳಂಬಾರ ಜಾತ್ರೆಗೆಂದು ಚಾಸಾ–9 ಮತ್ತು 10 ರವರ ಜೊತೆಗೆ ಹೋಗಿರುತ್ತಾರೆ. ತಾಯಿಗೆ ಹೇಳಿ ಹೋಗಿರುತ್ತಾನೆ. ತನ್ನ ಬೈಕಿನಲ್ಲೇ ಹೋಗಿರುತ್ತಾನೆ. ಆತನ ಬೈಕಿನ ಸಂಖ್ಯೆ 9006 ಆಗಿರುತ್ತದೆ. ನಾನು ಮೀನುಗಾರಿಕೆಗೆಂದು ಬೋಟಿಗೆ ಹೋದಾರ ಮಾರನೇ ದಿನ ಅಂದರೆ ದಿಃ24–04–2024 ರಂದು ಬೆಳಿಗ್ಗೆ 7.30 ಗಂಟೆಗೆ ನನ್ನ ಮಗನಿಗೆ ಅಪಘಾತವಾಗಿರುತ್ತದೆ ಎಂದು ತಿಳಿದಿರುತ್ತದೆ. ಹಟ್ಟಿಕೇರಿ ಬ್ರಿಡ್ಜ್ ಮೇಲ್ಗಡೆ ಅಪಘಾತವಾಗಿರುತ್ತದೆ ಎಂದು ಗೊತ್ತಾಗಿರುತ್ತದೆ. ನನ್ನ ಮಗನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ನಾನು ಆಸ್ಪತ್ರೆಗೆ ಹೋಗಿರುತ್ತದೆ. ತುಫಾನ್ ವಾಹನವು ನನ್ನ

ಮಗನ ವಾಹನಕ್ಕೆ ಡಿಕ್ಕಿ ಹೊಡೆದಿರುತ್ತದೆ. ನನ್ನ ಮಗನ ವಾಹನವು ಪಲ್ಟಿಯಾಗಿ ಬೆಂಕಿ ಹತ್ತಿಕೊಂಡಿದ್ದು, ನನ್ನ ಮಗ ಹಾಗೂ ಬೈಕು ಸುಟ್ಟುಹೋಗಿರುತ್ತದೆ. ಚಾಸಾ–10 ರವರಿಗೆ ಗಂಭೀರ ಗಾಯವಾಗಿರುತ್ತದೆ. ಚಾಸಾ–9 ರವರಿಗೆ ಮಂಡಿಯಲ್ಲಿ ಗಾಯವಾಗಿರುತ್ತದೆ. ನನ್ನ ಮಗನ ವಾಹನ ಕಾರವಾರ ಕಡೆಗೆ ಹೋಗುತ್ತಿದ್ದು, ತುಫಾನ್ ವಾಹನವು ಅಂಕೋಲಾ ಕಡೆಗೆ ಬರುತ್ತಿತ್ತು. ಇದ್ದ ನನ್ನ ಒಬ್ಬ ಮಗನ ಪರಿಸ್ಥಿತಿಯನ್ನು ನೋಡಿ ನನಗೆ ಏನೂ ತೋಚದಂತೆ ಆಗಿರುತ್ತದೆ. ನಂತರ ನಾನು ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ–1, ಸಾಕ್ಷಿಯ ಸಹಿಯನ್ನು ನಿಪಿ–1ಎ ಎಂದು ಗುರುತಿಸಲಾಯಿತು. ನಾನು ಅಪಘಾತ ಸ್ಥಳಕ್ಕೆ ಹೋದಾಗ ಆರೋಪಿ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಗೊತ್ತಾಗಿರುತ್ತದೆ. ಬೆಳಿಗಿನ ಜಾವ 4 ಗಂಟೆಗೆ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ಗುರುತಿಸುತ್ತಾರೆ. ಅಪಘಾತ ಸ್ಥಳದಲ್ಲಿ ನಾನು ಹೋದಾಗ ಆರೋಪಿಯನ್ನು ನೋಡಿರುತ್ತೇನೆ. ನಾನು ಆರೋಪಿಯನ್ನು ನೋಡಿದ್ದರ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಅಪಘಾತಪಡಿಸಿದ ವಾಹನದ ಸಂಖ್ಯೆಯನ್ನು ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ನಿಮ್ಮ ಮಗನ ವಾಹನದ ಸಂಖ್ಯೆ ಕೆ ಎ 19 ಇಇ 9006 ಆಗಿತ್ತು ಎಂದರೆ ಇರಬಹುದು. ನಿಮ್ಮ ಮಗನಿಗೆ ಅಪಘಾತಪಡಿಸಿದ ತುಫಾನ್ ವಾಹನ ಸಂಖ್ಯೆಯು ಕೆ ಎ 47 ಎಂ 4781 ಆಗಿತ್ತು ಎಂದರೆ ಸರಿ. ನೀವು ಅಪಘಾತದ ಸ್ಥಳಕ್ಕೆ ಹೋದಾಗ ಹಟ್ಟಿಕೇರಿಯ ಜನರು ಅಪಘಾತ ಯಾವ ರೀತಿ ಆಗಿರುತ್ತದೆ ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿಯ ಅತಿ ವೇಗ ಹಾಗೂ ಅಜಾಗರೂಕತೆ ಚಾಲನೆಯಿಂದ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತದೆ ಎಂದರೆ ಸರಿ. ಆರೋಪಿಯು ತನ್ನ ವಾಹನವನ್ನು ಮುಖಾಮುಖಿಯಾಗಿ ನಿಮ್ಮ ಮಗನ ವಾಹನಕ್ಕೆ ಡಿಕ್ಕಿಪಡಿಸಿ, ಅಲ್ಲಿಂದ ಓಡಿ ಹೋಗಿರುತ್ತಾನೆ ಎಂದರೆ ಸರಿ. ಚಾಸಾ-6,9 ಮತ್ತು 10 ರವರು ಆರೋಪಿಯನ್ನು ನೋಡಿ ಗುರುತಿಸಿದ ಮೇರೆಗೆ ಪೊಲೀಸ್ ಠಾಣೆಯಲ್ಲಿ ನೀವು ಆರೋಪಿಯನ್ನು ನೋಡಿರುತ್ತೀರಿ ಎಂದರೆ ಸರಿ. ಆರೋಪಿಯನ್ನು ಗುರುತಿಸಿದ್ದ ಬಗ್ಗೆ ಮರುಹೇಳಿಕೆಯನ್ನೂ ಸಹ ಕೊಟ್ಟಿರುತ್ತೀರಿ ಎಂದರೆ ಸರಿ. ನಿಮ್ಮ ಮಗನ ಬೈಕ್ ತುಫಾನ್ ವಾಹನವನ್ನು ರಸ್ತೆಯ ಬಲಕ್ಕೆ ಡಿವೈರ್ ಮೇಲೆ ಹತ್ತಿಸಿ, ಪಲ್ಟಿ ಕೆಡವಿದ್ದನು ಎಂದರೆ ಸರಿ. ಮೋಟರ್ ಸೈಕಲ್ಲಿಗೆ ಬೆಂಕಿ ಹತ್ತಿ ನಿಮ್ಮ ಮಗ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಐ.ಕೆ.ಹೆಚ್ ಇವರಿಂದಃ

3. ದೂರನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಅಂಕೋಲಾ ಪೊಲೀಸರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಪೊಲೀಸರು ದೂರನ್ನು ಬರೆದಿರುತ್ತಾರೆ ಎಂದು ಅವರ ಹೆಸರು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-1 ದೂರನ್ನು ಬರೆದವರು ಸಹಿ ಮಾಡಿರುತ್ತಾರಾ ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ಅಂಕೋಲಾ ಠಾಣೆಯಲ್ಲಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಪೊಲೀಸರು ಏನು ಬರೆದಿರುತ್ತಾರೆ ಎಂದು ನಿಮಗೆ ಯಾವುದೇ ಸ್ವಂತ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನೀವು ಕೇವಲ ಪೊಲೀಸರ ಹೇಳಿಕೆ ಮೇರೆಗೆ ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಹತ್ತಿರ ಎಲ್ಲ ಕೇಳಿಕೊಂಡು ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಮಗನಿಗೆ ಅಪಘಾತವಾಗಿದೆ ಎಂಬ ನಿಖರವಾದ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಊರಿನ ಜನರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತದ ಸ್ಥಳದ ಬಗ್ಗೆ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಹಟ್ಟಿಕೇರಿ ಬ್ರಿಡ್ಜ ಮೇಲೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯು ಉತ್ತರದ ಕಡೆಗೆ ಇಳಿಜಾರು ಇರುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಇರುತ್ತದೆ ಎಂದು ನುಡಿಯುತ್ತಾರೆ. ಕಾರವಾರದಿಂದ ಅಂಕೋಲಾ ಕಡೆಗೆ ಬರುವಾಗ ರಸ್ತೆಯನ್ನು ಏರಿ ಬರಬೇಕಾಗುತ್ತದೆ ಎಂದರೆ ಸರಿ. ಕಾರವಾರದಿಂದ ಅಂಕೋಲಾ ಕಡೆಗೆ ಬರುವಾಗ ಬ್ರಿಡ್ಜ ದಾಟಿ ನಂತರ ಟೋಲ್ ನಾಕಾ ಬರುವವರೆಗೂ ಏರಿನಲ್ಲಿಯೇ ಬರಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರದು

ಅಪಘಾತವಾದ ಸ್ಥಳದಲ್ಲಿ ಏರಿಕೆ ಇರುವುದಿಲ್ಲ, ಅದರ ಮುಂದಿನ ರಸ್ತೆಯು ಏರಿಕೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತವಾದ ಸ್ಥಳವನ್ನು ನೀವು ಯಾರ ಸಮಕ್ಷಮ ನೋಡಿರುತ್ತೀರಿ ಎಂದರೆ ಸಾಕ್ಷಿಯು ಇನ್ನೊಬ್ಬರು ಇದ್ದರು ಎಂದು ನುಡಿಯುತ್ತಾರೆ. ಕಾರವಾರ ಮತ್ತು ಅಂಕೋಲಾ ರಸ್ತೆಯು ಟು ವೇ ರಸ್ತೆಯಾಗಿರುತ್ತದೆ ಎಂದರೆ ಸಾಕ್ಷಿಯು ಬ್ರಿಡ್ಜ ಕಟ್ಟಾಗಿದ್ದರಿಂದ ಒಂದೇ ರಸ್ತೆ ಇತ್ತು ಎಂದು ನುಡಿಯುತ್ತಾರೆ. ದಕ್ಷಿಣ ಕಡೆಯಿಂದ ಉತ್ತರದ ಕಡೆಯ ರಸ್ತೆಯನ್ನು ಬ್ಲಾಕ್ ಮಾಡಿ, ಒಂದೇ ರಸ್ತೆಯನ್ನು ಬಿಟ್ಟಿದ್ದರು ಎಂದರೆ ಸರಿ. ತುಫಾನ್ ವಾಹನವು ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ನಿಮ್ಮ ಮಗ ಟ್ರಿಬಲ್ ರೈಡಿಂಗ್ ಮಾಡುತ್ತಿದ್ದ ಎಂದರೆ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗ ಕುಡಿದುಕೊಂಡು ನಶೆಯಲ್ಲಿ ಅತೀ ವೇಗವಾಗಿ ಚಲಾಯಿಸಿಕೊಂಡು ಹೋಗಿ ತುಫಾನ್ ವಾಹನದ ಮುಂದಿನ ಬಲಭಾಗದ ಡಿಸ್ಕಗೆ ಡಿಕ್ಕಿ ಹೊಡೆದಿದ್ದು, ಅಪಘಾತವಾಗಿದ್ದು ನಿಮ್ಮ ಮನಗ ತಪ್ಪಿನಿಂದ ಎಂದರೆ ಸರಿಯಲ್ಲ. ಅತೀ ವೇಗದಿಂದ ಡಿಕ್ಕಿ ಹೊಡೆದಿದ್ದರಿಂದ ನಿಮ್ಮ ಮಗನ ವಾಹನದ ಪೆಟ್ರೋಲ್ ಟ್ಯಾಂಕಿನ ಪ್ರೆಸ್ ಮಾಡುವ ಕ್ಯಾಪ್ ಹಾರಿ ಬೆಂಕಿ ಹತ್ತಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ತುಫಾನ ವಾಹನವು ನನ್ನ ಮಗನ ಬೈಕಿಗೆ ಡಿಕ್ಕಿ ಹೊಡೆದಿದ್ದರಿಂದ ಬೆಂಕಿ ಹತ್ತಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಮಗನ ಅತೀ ವೇಗದಿಂದ ಪೆಟ್ರೋಲ್ ಟ್ಯಾಂಕಿನ ಕ್ಯಾಪ್ ಹಾರಿ ಪೆಟ್ರೋಲ್ ಚಿಮ್ಮಿಕೊಂಡಿದ್ದು, ಆಗ ಬೆಂಕಿ ಹತ್ತಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ನಿಮ್ಮ ಮಗನ ಬೈಕಿ ಹೆಡ್ ಲೈಟ್ ಒಡೆದಿದ್ದರಿಂದ ಅದರಿಂದ ಸ್ಪಾರ್ಕ ಬಂದು ಬೆಂಕಿ ಹತ್ತಿಕೊಂಡಿರುತ್ತದೆ ಎಂದರೆ ನನಗೆ

ಗೊತ್ತಿರುವುದಿಲ್ಲ. ನಿಮ್ಮ ಮಗನ ವಾಹನವು ತುಫಾನ್ ವಾಹನದ ಮುಂದಿನ ಚಕ್ರದ ಬಲಭಾಗದ ಡಿಸ್ಕಗೆ ಡಿಕ್ಕಿ ಹೊಡೆದಿದ್ದರಿಂದ ತುಫಾನ್ ವಾಹನದ ಪವರ್ ಸ್ಟೇರಿಂಗ್ ಡಿವೈಡರ್ ನಡುವೆ ಇರುವ ಗಟಾರಿಗೆ ಹೋಗಿ ಬಿದ್ದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ಮಗ ಅತೀ ವೇಗದಿಂದ ವಾಹನವನ್ನು ಚಲಾಯಿಸುತ್ತಿದ್ದರಿಂದ ಹಿಂಬದಿ ಸವಾರರಾದ ಚಾಸಾ-9 ಮತ್ತು 10 ರವರ ಹಿಂದಿಕ್ಕೆ ಹಾರಿಕೊಂಡಿದ್ದರಿಂದ ಅವರು ಅಪಘಾತದಿಂದ ಬದುಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪೊಲೀಸರು ಬಿಡಿಸಿದ ಕಚ್ಚಾ ನಕಾಶೆಯನ್ನು ನೀವೇನಾದರೂ ನೋಡಿರುತ್ತೀರಾ ಎಂದರೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳಿದಂತಹ ಅಪಘಾತವಾದ ಸ್ಥಳದಲ್ಲಿ ಯಾವುದೇ ಅಪಘಾತವಾಗಿರುವುದೇ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮಗನ ಮರಣೋತ್ತರ ಪರೀಕ್ಷಾ ವರದಿಯಲ್ಲಿ ನಿಮ್ಮ ಮಗ ಸಾರಾಯಿ ಕುಡಿದಿದ್ದ ಎಂದು ಬಂದಿದ್ದು, ಅದನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು, ನನ್ನ ಮಗ ಸಾರಾಯಿ ಕುಡಿಯುದಿಲ್ಲ ಎಂದು ನುಡಿಯುತ್ತಾರೆ. ಅಂಕೋಲಾ ತಾಲೂಕಾ ವೈದ್ಯರು ನಿಮ್ಮ ಮಗ ಸಾರಾಯಿ ಕುಡಿದಿದ್ದ ಎಂದು ದಿಃ12-07-2024 ರಂದು ವರದಿ ಕೊಟ್ಟಿದ್ದು, ಅದನ್ನು ನೀವು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮುಂದೆ ನಿಮಗೆ ಪರಿಹಾರ ಸಿಗುವುದಿಲ್ಲ ಎಂಬ ಉದ್ದೇಶದಿಂದ ನೀವು ಹಾಗೂ ಪೊಲೀಸರು ಶ್ಯಾಮೀಲಾಗಿ ನಿಮ್ಮ ಮಗನ ಅಂಗಾಂಗಗಳನ್ನು ವಿಧಿ ವಿಜ್ಞಾನಕ್ಕೆ ಕಳುಹಿಸಿ ಒಂದು ಸುಳ್ಳು ಪ್ರಕರಣವನ್ನು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಪೊಲೀಸರ ಮುಂದೆ ಯಾವ

ದಿನಾಂಕದಂದು ಮರು ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ನೀವು ನ್ಯಾಯಾಲಯದ ಮುಂದೆ ಪ್ರಪ್ರಥಮಬಾರಿಗೆ ನೋಡುತ್ತಿದ್ದೀರಿ ಎಂದರೆ ಸಾಕ್ಷಿಯು ಆರೋಪಿಯು ನ್ಯಾಯಾಲಯಕ್ಕೆ 3-4 ಸಲ ಬಂದಿದ್ದು, ಆಗ ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ವಾಹನವನ್ನು ಅಪಘಾತಪಡಿಸಿ, ಪಲ್ಟಿ ಮಾಡಿ ಜಾಗದಿಂದ ಓಡಿ ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಅಪಘಾತವು ನಿಮ್ಮ ಮಗನ ತಪ್ಪಿನಿಂದಲೇ ಆಗಿದ್ದು, ಹಾಗೂ ನಿಮ್ಮ ಮಗನ ವಾಹನಕ್ಕೆ ಯಾವುದೇ ವಿಮೆ ಇಲ್ಲದ ಕಾರಣ ಪೊಲೀಸರ ಜೊತೆಗೆ ಶ್ಯಾಮೀಲಾಗಿ ಆರೋಪಿ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಕಾರವಾರದಿಂದ ಅಂಕೋಲಾಕ್ಕೆ ಬರುವ ವಾಹನವು ಬ್ರಿಡ್ಜ ದಾಟಿದ ನಂತರ ಏರಿಕೆ ಇರುವ ಕಾರಣ ನಿಧಾನವಾಗಿ ಚಲಾಯಿಸುತ್ತವೆ ಎಂದರೆ ಸಾಕ್ಷಿಯು ಅಪಘಾತದ ಸ್ಥಳದಲ್ಲಿ ಏರಿಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವ ಅಪಘಾತದ ಸ್ಥಳದ ಪಕ್ಕದಲ್ಲೇ 10-12 ಅಡಿ ತೆಗ್ಗು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ತುಫಾನ್ ವಾಹನವು ನಿಮ್ಮ ಮಗನ ವಾಹನಕ್ಕೆ ಡಿಕ್ಕಿ ಹೊಡೆದಿರುತ್ತದೆ ಎಂದು ನೀವು ಪೊಲೀಸರ ಮುಂದೆ ಸುಳ್ಳು ಹೇಳಿರುತ್ತದೆ ಎಂದರೆ ಸರಿಯಲ್ಲ. ಒಂದು ವೇಳೆ ತುಫಾನ್ ವಾಹನವು ನಿಮ್ಮ ಮಗನ ವಾಹನಕ್ಕೆ ಅತೀ ವೇಗದಿಂದ ಬಂದು ಡಿಕ್ಕಿ ಹೊಡೆದಿದ್ದರೆ ಹಿಂಬದಿ ಸವಾರರೂ ಸಹ ಮೃತಪಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ಮಗನ ತಪ್ಪಿನಿಂದ ಅಪಘಾತವಾಗಿದ್ದು, ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು

ದೂರನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಮಗನ ತಪ್ಪಿನಿಂದ ಅಪಘಾತವಾಗಿ ನಿಮ್ಮ ಮಗ ಬೆಂಕಿಯಲ್ಲಿ ಮೃತ ಪಟ್ಟಿದ್ದು, ಹಾಗೂ ನಿಮ್ಮ ಮಗನ ಬೈಕು ಸಹ ಪೂರ್ಣವಾಗಿ ಸುಟ್ಟು ಹೋಗಿರುತ್ತದೆ ಎಂದರೆ ಸರಿಯಲ್ಲ. ನೀವು ಈಗಾಗಲೇ ಲೋಕದಾಲತ್ತಿನಲ್ಲಿ ರೂ.19,50,000/–ಪರಿಹಾರವನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಹಣ ಇನ್ನೂ ಬಂದು ಮುಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ನೀವು ಕೊಟ್ಟಂತಹ ಸುಳ್ಳು ದೂರಿನ ಮೇರೆಗೆ ಖೊಟ್ಟಿ ತನಿಖೆಯನ್ನು ಮಾಡಿ, ದೋಷಾರೋಪಣಾ ಪಟ್ಟಿ ಸಲ್ಲಿಸಿ, ಅದಕ್ಕೆ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸರಕಾರಿ ಅಭಯೋಜಜಕರು ಪಾಟೀಸವಾಲಿನಲ್ಲಿ ಕೇಳಿದ ಪ್ರಶ್ನೆಗೆ ಸರಿ ಎಂದು ಉತ್ತರಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯಿಂದಾಗಲಿ ಅಥವಾ ತುಫಾನ್ ವಾಹನದಿಂದಾಗಲಿ ಯಾವುದೇ ಅಪಘಾತವಾಗದಿದ್ದರೂ ಸಹ ಅರೋಪಿಗೆ ತೊಂದರೆಯಾಗುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.